# ಬರೀ ಪುಸ್ತಕಗಳಲ್ಲ

ತಾಯಿ ಮಡಿಲಿನಲ್ಲಿ ಸಿಗುವ ಸುರಕ್ಷತೆ, ತಂದೆಯ ಕಣ್ಗಾವಲಿನಲ್ಲಿ ಸಿಗುವ ಅಭಯ, ಗೆಳೆಯರ ಒಡನಾಟದಲ್ಲಿ ಸಿಗುವ ಸಂತೋಷ – ಇವೆಲ್ಲವನ್ನೂ ಪುಸ್ತಕ ಓದುವ ಅನುಭವ ನೀಡುತ್ತದೆ. ಉತ್ತಮ ಪುಸ್ತಕವೊಂದು ಕೈಯಲ್ಲಿದ್ದರೆ ಸುಮಧುರ ಅನುಬಂಧದೊಂದಿಗೆ ಬೆಸುಗೆಯಾದಂತೆ. ಪುಸ್ತಕದಲ್ಲಿರುವುದು ಕೇವಲ ಅಕ್ಷರಗಳಲ್ಲ, ಮನುಷ್ಯನ ಮೇಧಾಶಕ್ತಿಗೆ ಪುರಾವೆಗಳು. ಇಂಥ ಕೆಲವು ಕೃತಿಗಳ – ಸಾಹಿತ್ಯ ಸಾಮ್ರಾಜ್ಯದಲ್ಲಿ ಅಚ್ಚಳಿಯದ ಛಾಪು ಮೂಡಿಸಿದ ಕೆಲವು ಅಪರೂಪದ ಪುಸ್ತಕಗಳ ಮಾಹಿತಿ ಇಲ್ಲಿದೆ.

■ ಪೃಥ್ವಿರಾಜ್



### ಡಾನ್ ಕ್ವಿಕ್ಸಾಟ್

ಮಧ್ಯವಯಸ್ಕ ವ್ಯಕ್ತಿಯೊಬ್ಬ ಇತಿಹಾಸ ಪ್ರಸಿದ್ಧ ರಾಜರ ವೀರಗಾಥೆಗಳನ್ನು ಓದಿ ಮನೋರೋಗಕ್ಕೆ ತುತ್ತಾಗುತ್ತಾನೆ. ತನ್ನನ್ನು ರಾಜನೆಂದು ಭಾವಿಸಿ ಸಾಹಸಯಾತ್ರೆಗಳನ್ನು ಮಾಡಲು ಅಣಿಯಾಗುತ್ತಾನೆ. ಗೊತ್ತು ಗುರಿಯಿಲ್ಲದ ಪಯಣದಲ್ಲಿ ಎದುರಾಗುವ ಗಾಳಿಯಂತ್ರಗಳನ್ನು ರಾಕ್ಷಸರಂತೆ, ಸತ್ರಗಳನ್ನು ರಾಜಸೌಧಗಳಂತೆ ಭಾವಿಸುತ್ತಾ ಮುನ್ನಡೆಯುತ್ತಿರುತ್ತಾನೆ. ಈ ಪಾತ್ರವನ್ನು ಆಧಾರವಾಗಿಟ್ಟುಕೊಂಡು, ಸುಮಾರು 400 ವರ್ಷಗಳ ಹಿಂದೆ ಕರ್ವಾಂಟಿಸ್ ಎಂಬ ಲೇಖಕ, ಸ್ಪ್ಯಾನಿಷ್ ಭಾಷೆಯಲ್ಲಿ ಬರೆದ ಕಾದಂಬರಿ 'ಡಾನ್ ಕ್ವಿಕ್ಸಾಟ್'. ಇದು ವಿನೋದದಂತೆ ಕಂಡರೂ ವಾಸ್ತವ ಸಂಗತಿಗಳಿಗೆ ದೂರವಾಗಿರುವ ಸಾಹಿತ್ಯವನ್ನು ಅಣಕಿಸುವಂತಿದೆ. ಮೊದಲ ಆಧುನಿಕ ಕಾದಂಬರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಈ ಕೃತಿಯ ಸುಮಾರು 50 ಕೋಟಿ ಪ್ರತಿಗಳು ಮಾರಾಟವಾಗಿವೆ. ಅತಿಹೆಚ್ಚು ಮಾರಾಟವಾದ ಕಾದಂಬರಿಯಾಗಿಯೂ ದಾಖಲೆ ಬರೆದಿದೆ.

### ಓದಲಾಗದ ಪುಸ್ತಕ!



ಸುಮಾರು 600 ವರ್ಷಗಳಷ್ಟು ಹಳೆಯದಾದ ತೊಗಲು ಪುಸ್ತಕವೊಂದಿದೆ. ಅದರ ಪ್ರತಿ ಪುಟದಲ್ಲೂ ಬಣ್ಣ ಬಣ್ಣದ ಚಿತ್ತಾರಗಳು, ಆದರೆ ಒಂದು ಅಕ್ಷರವೂ ಅರ್ಥವಾಗುವುದಿಲ್ಲ. ಆ ವಿಚಿತ್ರ ಪುಸ್ತಕದ ಹೆಸರೇ 'ವೋಯ್‌ನಿಚ್'. ರಹಸ್ಯ ಸಂಶೋಧನೆಗಳ ಸಾರ ಅಡಗಿರುವಂತಹ ಪುಸ್ತಕವೆಂದು, ಗ್ರಹಾಂತರವಾಸಿಯೊಂದು ಮರೆತುಹೋಗಿರುವ ಪುಸ್ತಕವೆಂದು, ಸ್ವರ್ಣವಿದ್ಯೆಯನ್ನು ವಿವರಿಸುವ ಸಂಕೇತ ಭಾಷೆಯನ್ನು ಒಳಗೊಂಡ ಪುಸ್ತಕವೆಂದು – ಹೀಗೆ ಹಲವು ಅಭಿಪ್ರಾಯಗಳು ಈ ಕೃತಿಯ ಬಗ್ಗೆ ಇವೆ. ಇದರಲ್ಲಿನ ಅಂಕಿಗಳು ಮತ್ತು ವೃಕ್ಷಗಳು ಭಾರತೀಯ ಕುರುಹುಗಳನ್ನು ಸೂಚಿಸುತ್ತಿರುವುದರಿಂದ, ನಮ್ಮ ದೇಶಕ್ಕೆ ಸಮೀಪದಲ್ಲಿರುವ ದ್ವೀಪವೊಂದರ ಕುರಿತಾದ ಪುಸ್ತಕವಾಗಿರಬಹುದು ಎಂಬ ವಾದವೂ ಇದೆ.

### ಅದ್ಭುತ ಪುಸ್ತಕ ಅನ್ನ ಕರೆನಿನಾ




ಈವರೆಗೆ ಪ್ರಕಟವಾಗಿರುವ ಉತ್ತಮ ಕಾದಂಬರಿಗಳ ಪಟ್ಟಿ ತಯಾರಿಸುವುದಕ್ಕೆ ಎಂತಹುದೇ ಮಾನದಂಡಗಳನ್ನು ಅನುಸರಿಸಿದರೂ 'ಅನ್ನ ಕರೆನಿನಾ' ಕೃತಿ ಆ ಪಟ್ಟಿಯಲ್ಲಿ ಇರುತ್ತದೆ. ಖ್ಯಾತ ರಷ್ಯನ್ ಲೇಖಕ ಟಾಲ್‌ಸ್ಟಾಯ್ ಅವರು ಸುಮಾರು 140 ವರ್ಷಗಳ ಹಿಂದೆ ಬರೆದ ಈ ಕೃತಿ ಇಂದಿಗೂ ಹಲವರಿಗೆ ಅಚ್ಚು–ಮೆಚ್ಚು. ಉನ್ನತಾಧಿಕಾರಿಯೊಬ್ಬನ ಪತ್ನಿ ಅನ್ನಾ, ವ್ರೋನ್‌ಸ್ಕಿ ಎಂಬ ಚೆಲುವನ ಪ್ರೀತಿಯ ಬಲೆಗೆ ಬೀಳುವ ಕಥೆ ಇದು. ಆಕರ್ಷಣೆ, ಅವಮಾನ, ಪಶ್ಚಾತ್ತಾಪ, ಕೋಪ, ಅಂತಸ್ತು – ಹೀಗೆ ಓದುಗನ ಗಮನ ಸೆಳೆಯುವ ಎಲ್ಲ ಅಂಶಗಳನ್ನು ಒಳಗೊಂಡ ಕಥೆ ಇದು. ಸಾಮಾಜಿಕ ಜೀವನವನ್ನು ದೃಷ್ಟಿಯಲ್ಲಿಟ್ಟುಕೊಂಡು ತನ್ನ ನಡವಳಿಕೆಯನ್ನು ಪರೀಕ್ಷಿಸಿಕೊಳ್ಳುವ ಅನ್ನಾ ಆತ್ಮಹತ್ಯೆ ಮಾಡಿಕೊಳ್ಳುವುದರೊಂದಿಗೆ ಈ ಕಥೆ ವಿಷಾದ ಅಂತ್ಯ ಕಾಣುತ್ತದೆ.




### ದುಬಾರಿ ಪುಸ್ತಕ

ಪುಸ್ತಕಗಳನ್ನು ಖರೀದಿಸಿ ಓದಬೇಕಾ... ಎಂದು ಯೋಚಿಸುವ ಕಾಲವಿದು. ಅಕ್ಷರಮೌಲ್ಯ ತಿಳಿದವರಿಗೆ ಪುಸ್ತಕಗಳ ಬೆಲೆ ಏನು ಎಂಬುದು ಗೊತ್ತಿರುತ್ತದೆ. ಹೀಗಾಗಿಯೇ ಲಿಯೊನಾರ್ಡೊ ಡಾ ವಿಂಚಿ ಬರೆದ 'ಕೋಡೆಕ್ಸ್ ಲಿಸೆಸ್ಟರ್' ಹಸ್ತಪ್ರತಿಯನ್ನು ದುಬಾರಿ ಬೆಲೆಗೆ ಬಿಲ್‌ಗೇಟ್ಸ್ ಖರೀದಿಸಿದರು. ಅದರ ಈಗಿನ ಮೌಲ್ಯ ₹350 ಕೋಟಿ! ಟೆಕ್‌ಟಾನಿಕ್ಸ್, ಪ್ಲಾನೆಟ್‌ಶೈನ್ ಎಂಬ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸುಮಾರು 500 ವರ್ಷಗಳ ಹಿಂದೆಯೇ ಈ ಪುಸ್ತಕದಲ್ಲಿ ನೀಡಲಾಗಿದೆ. ಇಟಾಲಿಯನ್ ಭಾಷೆಯಲ್ಲಿರುವ ಈ ಪುಸ್ತಕವನ್ನು 'ಮಿರರ್ ರೈಟಿಂಗ್' ರೀತಿಯಲ್ಲಿ ರೂಪಿಸಿರುವುದು ಮತ್ತೊಂದು ವಿಶೇಷ.